ಹೂವಿನೆದುರು ಸೋತು ಕೂರುವ ಹೂ ಮಾರುವ ಹುಡುಗಿ ಕೀನ್ ಆ್ಯನ್ ಪಾಶ್ಚಾತ್ಯೀಕರಣದ ಕೃತಕತೆಯ ಕಬಂಧ ಬಾಹುಗಳಲ್ಲಿ ಉಸಿರುಗಟ್ಟಿ ಸಾಯುತ್ತಿರುವ ಜೀವಂತ ಸಂಸ್ಕೃತಿಯ ಪ್ರತೀಕವಾಗಿ ಕಾಣುತ್ತಾಳೆ. ಬಾಲ್ಯದಿಂದಲೂ ತನ್ನನ್ನು ಪೊರೆಯುತ್ತ ಬಂದಿರುವ ಹಾಡನ್ನು ಕೇಳುತ್ತಲೇ ಕೊನೆಯುಸಿರೆಳೆಯುವ ಕವಿ ದಾವೊ ಕೂಡ, ಆಕಾಶದತ್ತ ಕೈಚಾಚುವ ಭರದಲ್ಲಿ ನಗರ ಕಳೆದುಕೊಂಡು ತಾಯಿಬೇರಿನಂತೇ ಭಾಸವಾಗುತ್ತಾನೆ.

'ಥ್ರೀ ಸೀಸನ್ಸ್', ಜಾಗತೀಕರಣದ ಸುನಾಮಿ ದಾಳಿಗೆ ತತ್ತರಿಸಿ ಹೋಗುತ್ತಿರುವ ವಿಯೆಟ್ನಾಂನ ಶೈಗಾನ್ ನಗರದ ತಲ್ಲಣಗಳನ್ನು ಹಲವು ಶಕ್ತಿಶಾಲಿ ಬಿಂಬಗಳ ಮೂಲಕ ದಾಟಿಸುವ ಸಿನಿಮಾ. ಯಾವುದನ್ನೂ ವಾಚ್ಯ ಎನಿಸದ ಹಾಗೆ, ಘೋಷಣೆಯ ಸೋಂಕೂ ಇಲ್ಲದಂತೆ, ಅತಿಯಾದ ಹಳಹಳಿಕೆ, ಎಲ್ಲವೂ ನಾಶವಾಗುತ್ತಿದೆ ಎಂಬ ಪೂರ್ತಿ ನಿರಾಶಾವಾದವೂ ಆಗದಂತೆ ಬಹುಸೂಕ್ಷ್ಮವಾಗಿ ಬೆಳದಿಂಗಳಿಗೆ ಕನ್ನಡಿ ಹಿಡಿದು ತೋರಿಸಿದಂತೆ ಕಾಣಿಸುವ ಸಿನಿಮಾ. ಈ ನಿರ್ಲಿಪ್ತ ಗುಣದಿಂದಲೇ ನಮ್ಮನ್ನು ಕದಡುವ, ಕಲಕುವ ಶಕ್ತಿಯನ್ನೂ ಹೊಂದಿರುವ ಸಿನಿಮಾ.

ಇಲ್ಲಿ ಬರುವ ಎಲ್ಲ ಪಾತ್ರಗಳೂ ವಿಚಿತ್ರ ಸಂಕಟಗಳ ಜಾಲದಲ್ಲಿ ಸಿಲುಕಿಕೊಂಡವರೇ. ಆದರೆ ತಮ್ಮನ್ನು ಬಂಧಿಸಿ ಕುಣಿಕೆ ಬಿಗಿಗೊಳಿಸುತ್ತಿರುವ ಜಾಲದ ಮೂಲ ಯಾವುದು ಎಂಬುದು ಮಾತ್ರ ಯಾರಿಗೂ ಗೊತ್ತಿಲ್ಲ. ಅದರಿಂದ ಬಿಡುಗಡೆಗೊಳ್ಳುವ ಸುಲಭ ದಾರಿಯೂ ಇನ್ನಷ್ಟು ಆಳಕ್ಕೆ ಮುಳುಗಿಸಲು ಸಂಚುಹೂಡುವ ಇನ್ನೊಂದು ಕುಣಿಕೆಯೇ ಎಂಬುದು ತಿಳಿಯದೇ ಅತ್ತಿತ್ತಲೇ ಚಲಿಸುತ್ತಿರುವ ವೇಶ್ಯೆ ಲ್ಯಾನ್, 'ದೊಡ್ಡ ಕಟ್ಟಗಳು, ಝಗಮಗಿಸುವ ಬೆಳಕೇ ಅಭಿವೃದ್ಧಿಯ ಸಂಕೇತ' ಎಂದು ಬಿಂಬಿಸುವ ಆಕರ್ಷಣೀಯ ಕುಣಿಕೆಯಲ್ಲಿ ಕೊರಳು ಸಿಕ್ಕಿಸಿಕೊಳ್ಳುತ್ತಿರುವ ಆ ಮಹಾನಗರದ ದ್ಯೋತಕವೇ ಆಗಿಬಿಡುತ್ತಾಳೆ.

ಮಾತಿಗಿಂತ ಮೌನದೃಶ್ಯಗಳ ಮೂಲಕವೇ ಹೆಚ್ಚಿ ಸಮರ್ಥವಾಗಿ ಅಂದುಕೊಂಡಿದ್ದನ್ನು ಸಹೃದಯನ ಎದೆಗೆ ದಾಟಿಸಬಹುದು ಎಂಬ ನಿರ್ದೇಶಕ ಟೋನಿ ಬೂಯಿ ಅವರ ನಂಬಿಕೆಯನ್ನು ರಿಚರ್ಡ್ ಹಾರೋವಿಟ್ಜ್ ಅವರ ಸಂಗೀತ ಇನ್ನಷ್ಟು ಪರಿಣಾಮಕಾರಿಯಾಗಿ ಸಾಕಾರಗೊಳಿಸಿದೆ. ಕಥೆಯಲ್ಲಿನ ಕಾವ್ಯಾತ್ಮಕ ಗುಣಕ್ಕೆ ಛಾಯಾಗ್ರಹಣದ ಗಟ್ಟಿ ಭಿತ್ತಿಯೂ ಗಟ್ಟಿಯಾಗಿ ಒದಗಿರುವುದನ್ನೂ ಇಲ್ಲಿ ಉಲ್ಲೇಖಿಸಲೇಬೇಕು. ಶಬ್ದ, ದೃಶ್ಯ, ಅಭಿನಯ ಈ ಮೂರೂ

| | | |
|---|---|---|
| ಚಿತ್ರ | : | ಥ್ರೀ ಸೀಸನ್ಸ್ |
| ನಿರ್ದೇಶನ/ನಿರ್ಮಾಣ /ಕಥೆ: | | ಟೋನಿ ಬೂಯಿ |
| ಭಾಷೆ | : | ವಿಯೆಟ್ನಾಮ್ |
| ದೇಶ | : | ಅಮೆರಿಕ–ವಿಯೆಟ್ನಾಮ್ |
| ವರ್ಷ | : | 1999 |
| ಸಂಗೀತ | : | ರಿಚರ್ಡ್ ಹಾರೋವಿಟ್ಜ್ |
| ಕಲಾವಿದರು | : | ಡೋನ್ ಡೌಂಗ್, ಜಿಯೊ ಬೂಯಿ, ಟ್ರಾನ್ ಮಾನ್ಹ್ ಕೋಂಗ್, ಗುಯೆನ್ ಗೊಕ್ ಹೀಪ್ ಗುಯೆನ್ ಹೂ ಡ್ವಾಕ್ |